# ತಿ. ನರಸೀಪುರದ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ

## ಸಿ.ಮಿಸ್.ಸಂಖ್ಯೆ 229/2019

PW-1

| | | |
|---|---|---|
| ಹೆಸರು | : | ಪದ್ಮಾವತಿ |
| ತಂದೆ/ಗಂಡನ ಹೆಸರು | : | ಮರಿಸ್ವಾಮಿ |
| ವಯಸ್ಸು | : | 45 ವರ್ಷ |
| ವೃತ್ತಿ | : | ಗೃಹಿಣಿ |
| ವಾಸ ಸ್ಥಳ | : | ಸೋಸಲೆ ಹಾಲಿ ನರಸೀಪುರ |
| ದಿನಾಂಕ | : | 02-01-2021 |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಪಿ.ಎಸ್. ವಕೀಲರಿಂದಃ

ಎದುರುದಾರ ನನ್ನ ಗಂಡನಾಗಿದ್ದು ನಮ್ಮಿಬ್ಬರ ಮದುವೆ ದಿನಾಂಕ 15/07/1993 ರಲ್ಲಿ ವಿದ್ಯೋದಯ ಹೈಸ್ಕೂಲು, ತಿ. ನರಸೀಪುರದಲ್ಲಿ ಆಗಿರುತ್ತದೆ. ಲಗ್ನವಾದ ನಂತರ ಎದುರುದಾರರು ನರಸೀಪುರದಲ್ಲಿ ಪೋಸ್ಟ್ ನಲ್ಲಿ ಕೆಲಸ ಮಾಡುತ್ತಿದ್ದರಿಂದ ನಾವು ನರಸೀಪುರದಲ್ಲಿ ವಾಸವಾಗಿದ್ದೆವು. ನನ್ನ ಗಂಡ ಕೆಲವು ದಿನಗಳ ಕಾಲ ನನ್ನ ಜೊತೆಗೆ ಚನ್ನಾಗಿ ಇದ್ದರು. ಇದರಿಂದಾಗಿ ನನಗೆ ಇಬ್ಬರು ಮಕ್ಕಳು ಜನಿಸಿರುತ್ತಾರೆ. ನನ್ನ ಗಂಡ ನನ್ನ ಸ್ವಂತ ತಂಗಿಯ ಜೊತೆಗೆ ಅನೈತಿಕವಾಗಿ ಸಂಬಂಧ ಇಟ್ಟುಕೊಂಡಿದ್ದರು, ಈ ವಿಚಾರ ನನಗೆ ಬಹಳ ದಿನಗಳ ನಂತರ ತಿಳಿದುಬಂದಿರುತ್ತದೆ. ಈ ವಿಷಯ ಗೊತ್ತಾಗಿ ನಾನು ನನ್ನ ತಂಗಿಯನ್ನು ಬೆಂಗಳೂರಿಗೆ ನನ್ನ ಅಣ್ಣನ ಜೊತೆಗೆ ಇರಲು ಕಳುಹಿಸಿಕೊಟ್ಟೆನು. ಆದರೂ ಕೂಡ ನನ್ನ ಗಂಡ ನನ್ನ ತಂಗಿಯನ್ನು ಬೆಂಗಳೂರಿನಿಂದ ಕರೆಯಿಸಿಕೊಂಡನು. ಆನಂತರ ತಂಗಿಯನ್ನು ಯಾವ ಕಾರಣಕ್ಕೆ ಕರೆಸಿಕೊಂಡೆ ಎಂಕು ಕೇಳಿದಾಗ ನನಗೆ ಅವಳೇ ಇಷ್ಟವೆಂದು ನನ್ನ ಗಂಡ ನನಗೆ ಮರುಉತ್ತರ ಕೊಟ್ಟಿರುತ್ತಾನೆ. ಇದಾದ ನಂತರ ನನ್ನ ಗಂಡ ಮತ್ತು ನನ್ನ ತಂಗಿ ಇಬ್ಬರೂ ಸೇರಿ ನನ್ನನ್ನು ವಿನಾಕಾರಣ ಹಿಂಸೆಗೆ ಒಳಪಡಿಸಿರುತ್ತಾರೆ. ನನ್ನ ಗಂಡ ತಂಗಿಯನ್ನು ಪ್ರೀತಿಸುವುದಾಗಿ ಮತ್ತು ನನಗೆ ವಿವಾಹ ವಿಚ್ಛೇದನ ಕೊಡು ಎಂದೂ ಕೂಡ ನನಗೆ ಕಿರುಕುಳ ಕೊಡುತ್ತಿದ್ದನು. ನನ್ನ ಗಂಡ ಮದ್ಯಸೇವನೆ ಮಾಡಿ ಬಂದು ನನ್ನನ್ನು ಹೊಡೆಯುತ್ತಿದ್ದನು. ಅದೇ ಸಮಯದಲ್ಲಿ ನನ್ನ ತಂಗಿಯೂ ಕೂಡ ನನಗೆ ಹೊಡೆಯುತ್ತಿದ್ದಳು. ಅವರಿಬ್ಬರ ಹಿಂಸೆಯನ್ನು ತಡೆಯಲಾರದೇ ನಾನು ತಲಕಾಡಿನಿಂದ ಸೋಸಲೆ ಊರಿಗೆ ಬಂದು ವಾಸವಾದೆನು. ನನ್ನ ಮಗಳ ವಿದ್ಯಾಭ್ಯಾಸ ಇದ್ದ ಕಾರಣ ಅವಳನ್ನು ತಲಕಾಡಿನಲ್ಲಿಯೇ ಬಿಡಬೇಕಾದ ಪ್ರಸಂಗ ಬಂದಿತ್ತು.

ನಂತರ ನನ್ನ ಗಂಡ ಮತ್ತು ತಂಗಿ ಇಬ್ಬರೂ ಕೂಡ ನಾನು ವಾಸವಿದ್ದ ಸೋಸಲೆ ಗ್ರಾಮಕ್ಕೆ ಬಂದೂ ಕೂಡ ನನಗೆ ಕಿರುಕುಳ ಕೊಡುತ್ತಿದ್ದರು. ಈ ಬಗ್ಗೆ ನಾನು ಬನ್ನೂರು ಪೊಲೀಸರಿಗೆ ದೂರನ್ನು ಕೂಡ ನೀಡಿರುತ್ತೇನೆ. ದೂರು ನೀಡಿದ ನಂತರ ಹೆಂಡತಿಯನ್ನು ಚನ್ನಾಗಿ ನೋಡಿಕೊಳ್ಳುತ್ತೇನೆ ಎಂದು ನನ್ನ ಗಂಡನು ಪೊಲೀಸರಿಗೆ ಮುಚ್ಚಳಿಕೆ ಬರೆದುಕೊಟ್ಟು ಬಂದಿರುತ್ತಾನೆ. ಇದಾದ ನಂತರ ಮತ್ತೆ ನನ್ನ ಗಂಡ ತನ್ನ ಹಳೆಯ ಚಾಳಿಯಲ್ಲಿಯೇ ಮುಂದುವರಿಸಿರುತ್ತಾನೆ. ನಾನು ವಾಸವಿದ್ದ ಸೋಸಲೆಯ ಮನೆ ಶಿಥಿಲವಾದ ಕಾರಣ ಅದನ್ನು ಮಹಿಳಾ ಸಂಘಕ್ಕೆ ಕೊಟ್ಟು ತಿ. ನರಸೀಪುರಕ್ಕೆ ಬಂದು ವಾಸವಾಗಿರುತ್ತೇನೆ. ನರಸೀಪುರದಲ್ಲಿ ವಾಸವಾಗಲು ಮನೆಗೆ 20 ಸಾವಿರ ಮುಂಗಡ ಹಣವನ್ನು ನನ್ನ ಗಂಡನೇ ಕೊಟ್ಟಿರುತ್ತಾನೆ. ಇದಾದ ನಂತರ ಎದುರುದಾರನು ನನಗೆ ಒಂದು ಬಿಡಿಗಾಸನ್ನೂ ಕೂಡ ಕೊಟ್ಟಿರುವುದಿಲ್ಲ. ನೀನು ಬೇಕಾದರೆ ನ್ಯಾಯಾಲಯದಿಂದ ಆದೇಶ ಪಡೆದುಕೊಂಡು ಬಾ ಎಂದು ಹೇಳಿ ಕಳುಹಿಸಿರುತ್ತಾನೆ. ನನ್ನ 2 ನೇ ಮಗ ಐ.ಟಿ.ಐ. ವಿದ್ಯಾಭ್ಯಾಸ ಮಾಡುತ್ತಿದ್ದಾನೆ. 2 ನೇ ಮಗನ ವಿದ್ಯಾಭ್ಯಾಸಕ್ಕೂ ಕೂಡ ಎದುರುದಾರನು ಯಾವುದೇ ಖರ್ಚು ವೆಚ್ಚಗಳನ್ನು ಕೊಡುತ್ತಿಲ್ಲ. ನಾನು ಈಗ ವಾಸವಿರುವ ಮನೆಗೆ ಬಾಡಿಗೆಯನ್ನು ಸಾಲವಾಗಿ ಪಡೆದು ಪಾವತಿ ಮಾಡುತ್ತಿದ್ದೇನೆ. ನನಗೆ ಜೀವನಾಂಶಕ್ಕೆ ಯಾವುದೇ ವ್ಯವಸ್ಥೆ ಇರುವುದಿಲ್ಲ. ಆದ್ದರಿಂದ ಅರ್ಜಿಯಲ್ಲಿ ಕೇಳಿರುವಂತೆ ಆದೇಶವಾಗಬೇಕೆಂದು ವಿನಂತಿಸುತ್ತೇನೆ.

ನನ್ನ ಲಗ್ನದ ಅಮಂತ್ರಣ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.1 ಎಂದು, ಲಗ್ನದ ಎರಡು ಫೋಟೋಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ.ಪಿ.2 ಮತ್ತು 3 ಎಂದು ಗುರುತಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿದಾರರ ಹೇಳಿಕೆಯನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ತಿ. ನರಸೀಪುರ.